**ಎಂವಿಸಿಃ 2482/2024 ಪಿಡಬ್ಲ್ಯುಃ 1 ಮನೋಜ್**

**ಸಾಕ್ಷಿಯನ್ನು ದಿಃ 02.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಪ್ರಮಾಣ ಪತ್ರ ಮತ್ತು ಅರ್ಜಿಯನ್ನು ಓದಿ ಸಹಿ ಮಾಡಿದ್ದೇನೆ. ಅರ್ಜಿಯಲ್ಲಿ ನಾನು ತ್ರಿವೇಣಿ ಇಂಜಿನಿಯರಿಂಗ್ ನಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿರುತ್ತೇನೆ. ಸದರಿ ಶಾಪ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಹಾಗೂ ಸಂಬಳ ತೆಗೆದುಕೊಳ್ಳುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಿಃ 30.09.2024 ರಂದು ತಗಳೂರುನಿಂದ ನಂಜನಗೂಡು ಕಡೆ ಹೋಗುತ್ತಿದ್ದೆ. ಅಪಘಾತ ಆದ ರಸ್ತೆ ನಕ್ಷೆಯ ಪ್ರಕಾರ ಎರಡು ಬೈಕ್ ನಡುವೆ ಅಪಘಾತ ಆಗಿದೆ ಎಂದರೆ ಸರಿ. ಸದರಿ ರಸ್ತೆ 24 ಅಡಿ ಇದೆ ಎಂದರೆ ಸರಿ. ಅಪಘಾತ ಸ್ಥಳದ ರಸ್ತೆಯ ಮುಂದು ತಿರುವು ಇದೆ ಎಂದರೆ ಸರಿ. ಸದರಿ ತಿರುವಿನಲ್ಲಿ ತಿರುಗಲು ರಸ್ತೆಯ ಬಲಬದಿಗೆ ತೆಗೆದುಕೊಂಡು ತಿರುಗಬೇಕು ಎಂದರೆ ಸರಿಯಲ್ಲ. ರಸ್ತೆಯ ಎಡಬದಿಯಲ್ಲೆ ಇದ್ದೇ ಎನ್ನುತ್ತಾರೆ. ನಿಪಿ. 4 ರ ಪ್ರಕಾರ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಎರಡು

ವಾಹನಗಳ ನಡುವೆ ಡಿಕ್ಕಿಯಾಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಮತ್ತೊಬ್ಬ ಬೈಕ್ ನವನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅಪಘಾತ ಬೆಳಗ್ಗೆ ಅಂದಾಜು 07.15 ಗಂಟೆಗೆ ಆಗಿದೆ. ದೂರನ್ನು 15 ದಿನದ ನಂತರ ನೀಡಿದ್ದೇನೆ ಎಂದರೆ ಸರಿ. ಆಸ್ಪತ್ರೆಗೆ ನನ್ನ ಹಿಂದಿನಿಂದ ಬರುತ್ತಿರುವ ವಾಹನದವರು ನನ್ನ ತಂದೆಗೆ ಕರೆ ಮಾಡಿ ಅವರು ಸೇರಿಸಿದ್ದಾರೆ. ಮೊದಲಿಗೆ ಕೃಷ್ಣ ಆಸ್ಪತ್ರೆಗೆ ಸೇರಿಸಿದ್ದಾರೆ. ಅಲ್ಲಿಂದ ಮೈಸೂರಿನ ಇ.ಎಸ್.ಐ ಆಸ್ಪತ್ರೆಗೆ ಬಂದಿದ್ದು ನಂತರ ಜೆ.ಎಸ್.ಎಸ್ ಆಸ್ಪತ್ರೆಗೆ ಸೇರಿಸಿದ್ದಾರೆ. ನನ್ನ ತಂದೆಯ ಹೆಸರು ಸತೀಶ್.

2. ನಿಪಿ. 10 ರ ಪ್ರಕಾರ ದಿಃ 30.09.2024 ರಂದು ದಾಖಲಾಗಿ ದಿಃ 01.10.2024 ರಂದು ಬಿಡುಗಡೆಯಾಗಿದ್ದೇನೆ ಎಂದರೆ ಸರಿ. ನನ್ನ ಸಂಪಾದನೆಯ ಬಗ್ಗೆ ದಾಖಲೆ ಹಾಜರು ಪಡಿಸದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳನ್ನು ನಾನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಇ.ಎಸ್.ಐ ಇನ್ಸುಶೂರೆನ್ಸ್ ಇದೆ. ಅದರಿಂದ ಔಷಧಿ ಬಿಲ್ಲು ಸಂಪೂರ್ಣ ಪಾವತಿ ಆಗಿದೆ ಎಂದರೆ ಸ್ವಲ್ಪ ಪಾವತಿ ಆಗಿದೆ ಎಂದರೆ ಸ್ವಲ್ಪ ಪಾವತಿ ಆಗಿದೆ ಎನ್ನುತ್ತಾರೆ. ಈಗ ನಾನು ಆರೋಗ್ಯವಾಗಿ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.